The other point is about compensation. The sale deposit should in the normal course go to the seller, because the purchaser does not purchase or he does not complete the transaction. Therefore, the Government in addition to depriving the purchaser of his deposit wants to deprive the seller also. The seller will not have to drawn as much returns from the lands as he could have because he knows that he would be parting with the land thus he is put to loss. Therefore, if the seller for any reason should default, then it is all right. Otherwise in fairness the deposit should go to the seller of the land because he is the owner. If you do not give him it will amount to another hardship. Suppossing, the market value of the land on the date of agreement is something and by the time it is actually purchased, the value comes down or there is change in the holding or in the soil condition, the purchaser may say that he is not interested. Then, who is the looser ? The seller having all these years suffered and not getting enough for the land, because the purchaser backs out, the seller is put to difficulty. Therefore, 25 per cent forfeiture should go to the seller of the land and not to the Government. The Government is only an intermediary for which they do not need such heavy commission.

Therefore, whatever facilities are there in clause 3 so far as South Canara and North Canara is concerned, it is quite reasonable to extended to ex-Mysore and if for any reason there should be any change, it can only to the extent as enumerated by Sri H. R. Keshavamurthy and it is a very good thing as it goes to the root of the actual social life of the agricultural class. I wish the Ministers takes these things into consideration.

Mr. SPEAKER.—Before I call upon other members to speak, I have to state that according to the provisional programme of business, issued on 4th July 1966, the sittings have to come to a close tomorrow. There are a number of Bills to be passed and other business also to be transacted. The House will accordingly have to revise the programme. On the first of August we will have voting of demands for additional and supplementary grants, consideration of Public Service Commission Report and three Bills. On 2nd, 3rd and 4th the rest of the work to the extent possible we will have to finish . The details of the work to be transacted have been circulated to the members separetely.

Sri V. S. PATIL (Belgaum I).—Sir, while considering this Bill by the Joint Select Committee it appears that they have not given due and full consideration to the primary aims and objectives of the present measure. This Bill is part and parcel of the definite policy of our Government to increase the production in agriculture, to see that the agriculture families are made to survive and get full employment throughout the year. At present due to fragments in agricultural land, the agriculturists in the rural areas do not get sufficient empolyment and naturally the man power is wasted in this country for a long period of a year. Then these people ought to have been given jobs or the Government ought to have started some factories or other works where the surplus population in the rural area can be employed and tremendous pressure that is there on the agricultural land is reduced. That is one of the objectives. Another object was that the production of agriculture must be increased and for that increase if small bits of agricultural land are scattered here and there, it hampers the improvement and naturally it comes in the way of the complete and full utilisation of agricultural lands. These aims were there when the Bill was originally brought up in Bombay Assembly and this is one of the Bill which must be considered along with the other Bills for land improvement that is, land reforms Bill, agricuitural pests and diseases supply of fertilisers and good seeds scheme, etc. All these things must be before our eyes when we consider this Bill. This is the part and parcel of that big programme for utilisation of man power in the rural areas for increasing agricultural produce and give employment to the rest of the people. At persent simply because in these agricultural families in villages there is some land, everybody sticks to it and no body gets full employment nor can they service on the income of the small bits of these lands. With this view, the joint Select Committee ought to have examined all the provisions and then recommend the amendments in the original Bill. But it appears they have neglected these basic principles and some how they have brought about some sort of compromise between various members and that appears to be reason why the main object has been practically neglected by the joint Select Committee. That is the very purpose for which the prevention of fragmentation and consolidation is aimed at. Some of our members choose to say that this Bill is for big landlords. But they must remember that there is ceiling

on the holding of agricultural land. When they have consented for the ceiling they cannot say that this Bill is for the benefit of the larger interests. Regarding fragmentation there is a great criticism and I am also not satisfied with what is defined here in clause 3. In the schedule there appears to be a lot of confusion in defining various classes of land. In Bombay Karnatak fragmentation and consolidation of holdings is enforced and it appears they have divided the land into two categories, wet and dry lands. Wet land area in our part is one acre and dry land is 4 acres. Below that it becomes a fragment.

4-30 P.M.

According to the schedule attached to this, Bill I do not think the Village Officers who are to make these entries will understand the implications of this schedule at all. They are persons who have passed only Vernacular Final and if this complicated measure is placed before them. I do not think they will appreciate it or can follow the trend of the law. If we look at the schedule, we find that dry land and garden land have been equated. I do not understand the intention of this equation. For example, in our Athni Taluka where the rainfall is less than 25 inches per year, if there are no rains then it is a scarcity area. Therefore, 4 acres can be kept for the dry land. But there are patches amongst this dry land where they can get sufficient water and if they sink a well there they can grow sugarcane, grapes and betel leaves. The per acre income in these garden lands is much more that we can get in the first class land defined in Class I and with lesser expenditure and lesser efforts. So, to equate dry land with garden land is fallacious. There must be a distinction between dry land and garden land. Why this equation has been made is very difficulty to understand. Perhaps Mr. M. R. Patil who was a member of this Joint Select Committee will be able to explain. My submission is that a distinction ought to be made between dry land and garden land. When the original survey was introduced in this country especially in our parts, this distinction between garden land, dry land and wet land was made. Garden land is always very heavily taxed. I do not know why in our present Act a gobye is given to this very important distinction. My submission is that this equation is not proper ; on the contrary, garden land must be equated with first-class land.

There is one more point to which I should like to refer and it is Clause 3 which gives the definition of standard area and fragment. Fragment must have relation to the small holding in our Land Reforms Act. Our understanding of ' a proper holding ' was that a family must be able to get work and also must be able to maintain itself on the extent of that particular piece of land. Upto that it is called a small holding. If the extent of land goes below that, then it must be treated as a fragment. Otherwise, there is no sense in saying that we want to consolidate the holdings. The whole purpose of this Bill is to consolidate the holdings and if we do not fix up a fragment in relation to the Land Reforms Bill

(SRI V. S. PATIL)

and if this is to be treated as a separate entity then there will be great confusion.

Then, I should like to refer to clause 47. I think that some of our Bombay Karnatak members must have been there in the Joint Select Committee. That is why it appears that they have proposed the validation of the illegal transactions that have taken place from 1947 till this Bill comes into force. In 1947, our prevention of Fragementation and Consolidation of Holdings Act was passed in Bombay and made applicable. Since then, several people have alienated their properties in contravention of that Act knowingly and if we pass this clause it means legalising the illegal acts done by those persons. I do not think we come here to legalise the acts, illegally done by those who have infringed the law. If we are to rectify them, I do not think there will be any sense in passing any law at all. Clause 39 says that transfers or partitions of any land contrary to the provisions of this Act shall be void. This is the very wording that were there in the Bombay Act and we are giving licence to those who infringes these provisions by taking some nominal fee. That is not proper and so far as enforcement of our laws is concerned, this will be a very bad precedent to encourage those who commit illegal acts or those who defy the law.

Similarly, I do agree with the comments made by Sri Suryanarayana Rao under clause 5. Why should the Government take the amount? That is not known to us. This is a rather strange provision made in the Bill. I should like to suggest that at the most Government may charge for the trouble given to the Tahsildar for holding that inquiry, say 5 per cent or 10 per cent of the amount deposited may be forfeited to the Government and the rest should be handed over to the person who is entitled, either the seller or the purchaser. If the purchaser is not at fault then it should be returned to him. If he is really in fault, then it should be handed over to the person whose land was to be sold, but Government should not have an eye on the properties belonging to others. My submission is that we must forfeit only what is required for our services and not for the faults of others.

With these remarks, I submit the Bill may be thoroughly considered and after giving due consideration to the comments made by this side of the House, the Bill may be passed.

†ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಸ್ವಾಮಿ, ಅಧ್ಯಕ್ಷರೇ, ಈಗ ನಮ್ಮ ಮುಂದೆ ಬಂದಿರತಕ್ಕ ಬಿಲ್ಲಿನ ಉದ್ದೇಶ ಬಹಳ ಒಳ್ಳೆಯದೇ ಆದರೂ ಮಾನ್ಯ ರೆವಿನ್ಯೂ ಮಂತ್ರಿಗಳಿಗೆ ಗೊತ್ತಿರುವಂತೆ ಹಳೇ ಮೈಸೂರು ಭಾಗದಲ್ಲಿರತಕ್ಕ ರೈತರಿಗೆ ಇದರಿಂದ ಬಹಳ ಅನಾನುಕೂಲವಾಗುತ್ತದೆ. ಒಬ್ಬ ರೈತನಿಗೆ ಸರ್ಕಾರದವರು ಹೇಳತಕ್ಕ ಸ್ಟ್ಯಾಂಡರ್ಡ್ ಎಕರೆಗಳಲ್ಲ, ಸಾಮಾನ್ಯ ರೀತಿಯ 2-3 ಎಕರೆ ಭೂಮಿ ಸಹಿತ ಇರುವುದಿಲ್ಲ. ಇಲ್ಲಿಯವರೆಗೂ ಇರತಕ್ಕ ಭೂಮಿಯನ್ನೇ ಇಲ್ಲಿ ತಮ್ಮ ಮಕ್ಕಳಿಗೆ ವಂಶಪಾರಂಪರ್ಯವಾಗಿ ಹರಿದು ಹಂಚುತ್ತಾ ಬಂದಿದ್ದಾರೆ. ಹೀಗೆ ಜಮೀನನ್ನು ಹರಿದು ಹಂಚಿದರೆ ಅದರಲ್ಲಿ ಹೆಚ್ಚಿನ ಉತ್ಪತ್ತಿ ಬರುವುದಿಲ್ಲ, ಅದರಿಂದ ಜಮೀನನ್ನು ಇನ್ನು ಮುಂದೆ ಹರಿದು ಹಂಚಬಾರದೆಂದು ಹೇಳಿದ್ದಾರೆ. ಇದೇನಾದರೂ ಶಾಸನ ಕಡತಕ್ಕೇರಿದರೆ ಇದರಿಂದ

ಸಣ್ಣ ಸಣ್ಣ ಹಿಡುವಳಿದಾರರಿಗೆ ಬಹಳ ತೊಂದರೆಯಾಗುತ್ತದೆ, ಬಹಳ ಹಿಂಸೆಯೂ ಆಗುತ್ತದೆ. ಈ ದಿವಸ ಯಾರಾದರೊಬ್ಬ ರೈತ ತನ್ನ ಮಕ್ಕಳಿಗೆ ಆ ಎರೆಹೊಲದಲ್ಲಿಷ್ಟು ಸಾರಿಗೆ ಹೊಲದಲ್ಲಿಷ್ಟು ಎಂತ ಭಾಗ ಮಾಡಿಕೊಟ್ಟ ಪ್ರಸಂಗಗಳಿರತಕ್ಕ ಕಡೆ ಕನ್‌ಸಾಲಿಡೇಷನ್ ಮಾಡಿದರೆ ಅಂಥ ಸಂದರ್ಭದಲ್ಲಿ ಆ ಜಮೀನುಗಳು ಅಕ್ಕಪಕ್ಕದಲ್ಲಿರತಕ್ಕ ಬೇರೆಯವರಿಗೆ ಹೋಗದಂತೆ ಅವು ಆ ಹಕ್ಕುದಾರರಿಗೇ ಸೇರುವಂತೆ ಒಂದು ಪ್ರಾವಿಷನನ್ನು ಇದರಲ್ಲಿ ಸೇರಿಸಬೇಕಾದ್ದು ಅಗತ್ಯ. ಜಮೀನನ್ನು ಒಬ್ಬನಿಂದ ಕಿತ್ತುಕೊಂಡ ಮೇಲೆ ಆತನಿಗೆ ಜೀವನ ಮಾಡಲು ಯಾವುದಾದರೊಂದು ಕೂಲಿನಾಲಿಗೆ ಅವಕಾಶ ಇರುವಂಥ ಮಾರ್ಗವನ್ನು ಸರ್ಕಾರದವರು ಇಲ್ಲಿಯವರೆಗೂ ಕಲ್ಪಿಸಿಲ್ಲ. ಇನ್ನು ಮುಂದೆ ಅದನ್ನು ಮಾಡದಿದ್ದರೆ ಸಾಧ್ಯವೇ ಇರುವುದಿಲ್ಲ, ಜಮೀನು ಕಳೆದುಕೊಳ್ಳುವವನ ಜೀವನಕ್ಕೊಂದು ಮಾರ್ಗವನ್ನು ಕಲ್ಪಿಸುತ್ತೇವೆ ಎಂಬ ಭರವಸೆಯನ್ನು ಸರ್ಕಾರದವರು ಕೊಟ್ಟರೆ ಇದನ್ನು ಜಾರಿಗೆ ತರಬಹುದು ಎಂದು ಹೇಳುತ್ತೇನೆ. ಜಮೀನು ಹಂಚತಕ್ಕ ವಿಧಾನದಲ್ಲಿ ಲಾಟ್ರಿ ಹಾಕತಕ್ಕ ಮಾರ್ಗ ಒಳ್ಳೆಯದಲ್ಲ. ಆದರೆ ಇತ್ತೀಚೆಗೆ ಟೆನೆನ್ಸಿ ಕಾನೂನು ದೇಶದಲ್ಲಿ ಜಾರಿಗೆ ಬಂದಮೇಲೆ ಇಲ್ಲಿ ಕುಳಿತು ಅಧಿಕಾರ ಮಾಡತಕ್ಕ ಮಂತ್ರಿಗಳಿಗೆ ಇದರಿಂದ ಆಗುತ್ತಿರುವ ಅನಾಹುತಗಳೇನೆಂಬುದು ಗೊತ್ತಾದಂತೆ ಕಾಣುತ್ತಿಲ್ಲ. ಇಲ್ಲದ ಅನ್ಯಾಯ, ಅನಾಚಾರ, ದುರಾಚಾರಗಳು ಹುಟ್ಟಿ ಜನರನ್ನೆಷ್ಟು ಕೆಡಿಸಬೇಕೋ ಅಷ್ಟೂ ಕೆಡಿಸಿವೆ. ಉತ್ತರ ಕರ್ಣಾಟಕದಲ್ಲಿ ಸಾವಿರಾರು ಎಕರೆ ಭೂಮಿಯನ್ನು ಇಟ್ಟುಕೊಂಡಿರತಕ್ಕ ಜನರಿದ್ದಾರೆ, ಅಂಥ ಕಡೆಗೆ ಇದು ಲಾಗು ಆಗಬಹುದೇ ವಿನಾ ಹಳೇ ಮೈಸೂರು ಭಾಗಕ್ಕೆ ಇದು ಸರಿಯಲ್ಲ ಎಂದು ಹೇಳುತ್ತೇನೆ. ಇನ್ನೂ ಕೆಲವು ಸಂದರ್ಭದಲ್ಲಿ ಭೂಮಿಯನ್ನು ವಿಭಾಗ ಮಾಡುವುದಕ್ಕೆ ಅವಕಾಶವಿಲ್ಲದಕಡೆಯಲ್ಲಿ ಭೂಮಿಯ ಬೆಲೆ ಏನಾಗುತ್ತೆಂಬುದನ್ನು ಕಂಡು ಹಿಡಿದು ಅದರಲ್ಲಾದರೂ ಅಣ್ಣ ತಮ್ಮಗಳ ಹಿಸ್ಸೆ ಅವರಿಗೆ ಸಿಗುವಂತೆ ಒಂದು ವ್ಯವಸ್ಥೆಮಾಡಬೇಕೆಂದೂ, ಭೂಮಿಯನ್ನು ಕಳೆದುಕೊಳ್ಳತಕ್ಕ ಜನರಿಗೆ ಉದ್ಯೋಗಗಳನ್ನು ಒದಗಿಸಿಕೊಡಬೇಕೆಂದೂ ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಇದರ ವಿಚಾರದಲ್ಲಿ ನನಗೆ ಒಂದು ಅನುಮಾನ ಬಂದಿದೆ. ಕನ್‌ಸಾಲಿಡೇಷನ್ ವಿಚಾರದಲ್ಲಿ ನನ್ನ ವಿರೋಧವೇನೂ ಇಲ್ಲ. ಸೆಲೆಕ್ಟ್ ಸಮಿತಿಯವರು ಈ ಮಸೂದೆಯನ್ನು ಒಪ್ಪಿ ಇಲ್ಲಿಗೆ ಕಳುಹಿಸಿದ್ದರೂ ಇಲ್ಲಿ ಇದನ್ನು ತಳ್ಳಿಹಾಕುವುದಕ್ಕೆ ಅವಕಾಶವಿದೆ.

MR. SPEAKER.—I never said that this House has no right to reject the Report. Rule 77 lays down the procedure.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆ ಸಮಿತಿಯವರು ವರದಿಯನ್ನು ಈ ಸಭೆಗೆ ಒಪ್ಪಿಸಿದ ಕಾಲವಲ್ಲಿ, ಅಂದರೆ, ನಾನು ಆ ಸಮಿತಿಯಲ್ಲಿರತಕ್ಕ ಯಾವ ಸದಸ್ಯರಿಗೂ ಆಕ್ಷೇಪಣೆಮಾಡುತ್ತಿಲ್ಲ, ಆ ಸಮಿತಿಯಲ್ಲಿದ್ದ ಶ್ರೀ ಎಂ. ಆರ್. ಪಾಟೀಲರಂಥವರೇ ಅದನ್ನು ಒಪ್ಪಿದ್ದಾರೆ, ಅವರು ಬಹಳ ಬುದ್ಧಿವಂತರು, ಅವರು ಒಪ್ಪಿರುವುದರಿಂದ ತಾವೆಲ್ಲರೂ ಇದನ್ನು ಒಪ್ಪಿಕೊಳ್ಳಬೇಕು ಎಂಬುದಾಗಿ ಹೇಳಿದ್ದರು. ಆದರೆ ನಾನು ಹೇಳುತ್ತೇನೆ, ಈ ಮಸೂದೆಯಲ್ಲಿ ಈಗ ಹಳೆಯ ಮೈಸೂರು ರೈತರಿಗೆ ಬಹಳ ಅಪಾಯಕಾರಿಯಾದಂಥ ಕೆಲವು ಕಲಂಗಳಿವೆ. ಕ್ಲಾಜ್ (3)ಕ್ಕೆ ಕೊಟ್ಟಿರತಕ್ಕ ಷೆಡ್ಯೂಲ್ 6 ಮತ್ತು 7 ರಲ್ಲಿ ಹೇಳಿರತಕ್ಕದ್ದು ಬಹಳ ಅಪಾಯಕಾರಿ. ಇದರಿಂದ ಅನೇಕರಿಗೆ ಬಹಳ ತೊಂದರೆಯಾಗುತ್ತದೆ. 3 ಎಕರೆಯಲ್ಲಿ ತೆಂಗಿನ ಮರಗಳಿರತಕ್ಕ ಒಂದು ತೋಟ ಒಂದು ಸಂಸಾರವನ್ನು ಸುಖವಾಗಿ ಸಾಕುತ್ತದೆ. ಈ ದಿವಸ ಒಬ್ಬ ತಾಶೀಲ್ದಾರನಿಗೆ 4 ಎಕರೆ ಖುಷ್ಕಿ ಜಮೀನನ್ನು ಕೊಡುವುದಕ್ಕೆ ಮಾತ್ರ ಅಧಿಕಾರವಿದೆ. ಈ ಹಿಂದೆ ಲ್ಯಾಂಡ್ ರಿಫಾರಂಸ್ ಸಮಿತಿಯಲ್ಲಿ ತರೀ ಜಮೀನು ಮತ್ತು ಖುಷ್ಕಿ ಜಮೀನು ಅಂದರೇನೆಂಬುದನ್ನು ಡಿಟರ್ಮಿನ್ ಮಾಡತಕ್ಕ ಕಾಲದಲ್ಲಿ—ಏತದಿಂದ ಮತ್ತು ಕಪಿಲೆ ಇತ್ಯಾದಿಗಳಿಂದ ನೀರನ್ನೆತ್ತಿ ಬೇಸಾಯ ಮಾಡತಕ್ಕ ಭೂಮಿಗಳು ತರೀ ಭೂಮಿಯಾಗುವುದಿಲ್ಲ ಎಂಬುದಾಗಿ ತೀರ್ಮಾನ ಮಾಡಲಾಗಿದೆ. ಅದರಂತೆ ಭೂಸುಧಾರಣಾ ವಿಧೇಯಕದಲ್ಲಿ ಅದನ್ನು ಅಡಕಮಾಡಲಾಗಿತ್ತು. ಈಗ ಕ್ಲಾಜ್ (7)ರಲ್ಲಿ ಹೇಳಿರತಕ್ಕದ್ದನ್ನು ತೆಗೆದುಕೊಂಡರೆ—ಯಾವುದಾದರೂ ಒಂದು ಗ್ರಾಮಕ್ಕೆ ಹೋಗಿ ಅಲ್ಲಿರತಕ್ಕ ಪರಿಸ್ಥಿತಿಯನ್ನು ನೋಡುವುದಾದರೆ ಅಲ್ಲಿ ಯಾರಿಗೂ ಒಂದು ಸಮನಾಗಿ 4 ಎಕರೆ ಭೂಮಿ ಇರುವುದಿಲ್ಲ. ಅಂಥ ಕಡೆಗಳಲ್ಲಿ ಭೂಮಿಯನ್ನು ಹೇಗೆ ಪಂಚಾಯಿತಿಯವರ ಸಹಾಯದಿಂದ ಕನ್‌ಸಾಲಿಡೇಟ್ ಮಾಡುತ್ತೀರಿ ? ಇದೂ ಅಲ್ಲದೆ ಹಿಂದೆ ಗ್ರೋವೋರ್ ಫುಡ್ ಯೋಜನೆಯ ಕಾಲದಲ್ಲಿ ಕೆಲವರಿಗೆ ಜಮೀನನ್ನು ಕೊಡಲಾಗಿತ್ತು, ಈ ದಿವಸ ಅಂಥ ಜಮೀನಿಗೂ ಸಹಾ ಆಧಾರ ವಗೈರೆ ಇಲ್ಲದೆ ಲ್ಯಾಂಡ್ ಮಾರ್ಟ್ಗೇಜ್ ಬ್ಯಾಂಕಿನವರು ಸಾಲ ಮಂಜೂರುಮಾಡಬಹುದೆಂದು ಅವಕಾಶ ಕಲ್ಪಿಸಲಾಗಿದೆ. ಅಂಥ ಜಮೀನುಗಳೂ ಅಲ್ಲಿ ಕನ್‌ಸಾಲಿಡೇಷನ್ ಪರಿಮಿತಿಯಲ್ಲಿ ಬರುತ್ತವೆ. ಅಂಥ ಸಂದರ್ಭಗಳಲ್ಲಿ ಸರ್ಕಾರದವರು ಜಮೀನನ್ನು ಯಾರಿಗೆ ಕೊಡುತ್ತಾರೆಂದು ಕೇಳುತ್ತೇನೆ ? ಅಂದರೆ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

'ಎ' ಎನ್ನುವವನು 'ಬ'ಗೆ ಭೂಮಿ ತೆಗೆದುಕೊಡುತ್ತಾನೆ. 'ಬ' ಎನ್ನುವವನು 'ಸಿ'ಗೆ ಭೂಮಿ ಕೊಡುತ್ತಾನೆ. ಆಂದರೆ ಒಂದೊಂದು ಭಾಗದಲ್ಲಿ ಒಂದೊಂದು ರೀತಿಯ ಕ್ವಾಲಿಟಿ ಇರುವ ಭೂಮಿ ಇರುತ್ತದೆ. ಒಂದು ಜಮೀನಿನಲ್ಲಿ ಪಂಪ್ ಸೆಟ್ ಇರುತ್ತದೆ. ಮತ್ತೊಂದರಲ್ಲಿ ಇರುವುದಿಲ್ಲ. ಇದರಲ್ಲಿ ಯಾರಿಗೆ ಅಧಿಕಾರ ಕೊಟ್ಟಿದ್ದೀರಿ ? Are you really doing service to the people. Are you really bringing this piece of legislation for a family holding ?

ಇದರಿಂದ ಏನು ಅನಾಹುತವಾಗುತ್ತದೆಂಬುದನ್ನು ತಾವು ತಿಳಿಯಬೇಕು. ನಾಲ್ಕು ಎಕರೆ ಎಂಬುದು ಸರಿಯಲ್ಲ, ಬಾಂಬೆ ಕರ್ನಾಟಕದಲ್ಲಿ ಸಾವಿರ, ಐದು ಸಾವಿರ ಎಕರೆ ಜಮೀನು ಇರುವ ದೇಶಪಾಂಡೆ ಮುಂತಾದವರಿರುತ್ತಾರೆ. ಅಂತಹವರಿಗೆ ಪರವಾಗಿಲ್ಲ. ಆದರೆ ಅನೇಕ ಹಳ್ಳಿಗಳಲ್ಲಿ ಒಂದೆರಡು ಎಕರೆ ಇರುವವರು ಬಹಳ ಮಂದಿ ಇದ್ದಾರೆ. ನಮ್ಮ ಊರಿನಲ್ಲಿ ಒಂದು ಸಂಸಾರದಲ್ಲಿ 133 ಜನ ಮೊಮ್ಮಕ್ಕಳು ಇದ್ದಾರೆ. ಅಂತಹವರು ಏನು ಮಾಡಬೇಕು ? ಇನ್‌ಫ್ಲೂಯೆನ್ಸ್ ಇರುವವರಿಗೆ ಒಂದು ರೀತಿಯಾಗುತ್ತದೆ. ಯಾವು ಯಾವುದನ್ನು ತೆಗೆದುಕೊಂಡು ಕೊಡುತ್ತೀರೆಂದು ಸರಿಯಾಗಿ ಹೇಳಿಲ್ಲ. ಒಂದು ಸಂಸಾರದಲ್ಲಿ ನಾಲ್ಕು ಎಕರೆ ಜಮೀನು ಇದ್ದರೆ ಪಾಲು ಮಾಡಿಕೊಳ್ಳಲು ಅವಕಾಶವಿರುವುದಿಲ್ಲ. ಅದಕ್ಕೆ ತಾವು ಏನಾದರೂ ಅವಕಾಶ ಮಾಡಬೇಕಾಗಿತ್ತು. ಇಂಗ್ಲೆಂಡಿನಲ್ಲಿ ದೊಡ್ಡ ಮಗನಿಗೆ ಜಮೀನು ಕೊಟ್ಟು ಉಳಿದವರಿಗೆ ಸರ್ಕಾರದವರು ಬೇರೆ ಕೆಲಸಗಳನ್ನು ಒದಗಿಸುತ್ತಾರೆ. ಅದೇ ರೀತಿ ಈ ದೇಶದಲ್ಲಿ ನೀವಾಗಲೀ, ಕೇಂದ್ರಸರ್ಕಾರದವರಾಗಲಿ ಏನಾದರೂ ಮಾಡಿದ್ದಾರೆಯೇ ಎಂದರೆ ಏನೂ ಇಲ್ಲ. ಒಬ್ಬನಿಗೆ ನಾಲ್ಕು ಜನ ಮಕ್ಕಳಿದ್ದರೆ, ಅವರಲ್ಲಿ ಒಬ್ಬನಿಗೆ ಜಮೀನು ಸಿಗುತ್ತದೆ, ಉಳಿದವರು ಬೀದಿಭಿಕಾರಿಗಳಾಗಬೇಕು. ಅಥವಾ ಅವರು ಏನಾದರೂ ಓದಿದ್ದರೂ ಸಹ, ಶ್ರೀಮಾನ್ ಕಂಠಿಯವರ ಹತ್ತಿರ ಹೋದರೆ ಕೆಲಸವಿಲ್ಲವೆನ್ನುತ್ತಾರೆ, ರಾಜಸ್ವ ಮಂತ್ರಿಯವರ ಹತ್ತಿರ ಹೋದರೆ ಕೆಲಸವಿಲ್ಲವೆನ್ನುತ್ತಾರೆ, ವಿದ್ಯುಚ್ಛಕ್ತಿ ಬೋರ್ಡಿನಲ್ಲಿ ಕೆಲಸವಿಲ್ಲವೆನ್ನುತ್ತಾರೆ, ಹೋಗಲಿ ಕಾರ್ಖಾನೆಗಳಲ್ಲಿ ಕೆಲಸಸಿಗುತ್ತದೆಯೇ ಎಂದರೆ ಅಲ್ಲಿಯೂ ಸಿಗುವುದಿಲ್ಲ. ಏನೂ ಓದದೇ ಇರುವ ನನ್ನಂಥ ನಿರಕ್ಷರಕುಕ್ಷಿಯ ಪಾಡೇನು ? ನಾಲ್ಕು ಜನ ಅಣ್ಣತಮ್ಮಂದಿರಲ್ಲಿ ಮೊದಲನೆಯವನಿಗೆ ಜಮೀನು ಸಿಕ್ಕಿದರೆ ಉಳಿದವರು ತಮ್ಮ ಹೆಂಡರು ಮಕ್ಕಳನ್ನು ಯಾವ ರೀತಿ ಸಾಕಬೇಕು, ಅವರ ಪಾಡೇನು ? ಇಲ್ಲಿ ನಾಲ್ಕು ಎಕರೆ ಎಂದಿರುವುದನ್ನು ತೆಗೆದುಬಿಡಬೇಕೆಂದು ಶ್ರೀ ಕೇಶವಮೂರ್ತಿಯವರು ಹೇಳಿರುವುದು ಸರಿಯಾಗಿದೆ, ಅಧಿಕಾರಿಗಳು ಹೇಳಿಬಿಟ್ಟರು ಎಂದು ನೀವು ಇಲ್ಲಿ ಸೇರಿಸಬೇಡಿ, ರಾಜಸ್ವ ಮಂತ್ರಿಗಳಾದ ನಿಮಗೆ ಸಣ್ಣ ಸಣ್ಣ ಹಿಡುವಳಿಯಿಂದ ಏನು ತೊಂದರೆಯಾಗಿದೆ ಎಂಬುದು ಗೊತ್ತಿದೆ. ಶ್ರೀಮಾನ್ ಪುಟ್ಟಸ್ವಾಮಿಯವರಿಗೆ ಗೊತ್ತಿದೆ. ಡಾಕ್ಟರ್ ನಾಗಪ್ಪಆಳ್ವಾರವರಿಗೆ ಗೊತ್ತಿಲ್ಲದೆ ಇರಬಹುದು. ಅವರು ಡಾಕ್ಟರ್. ಇದರಲ್ಲಿ ಡ್ರೈ ಲ್ಯಾಂಡ್ ಮತ್ತು ವೆಟ್ ಲ್ಯಾಂಡ್ ಎಂಬುದರ ಬಗ್ಗೆ ಸರಿಯಾಗಿ ಹೇಳದಿರುವುದರಿಂದ ಬಹಳ ಅನ್ಯಾಯವಾಗುತ್ತದೆ. ಇದರ ಬಗ್ಗೆ ತಾವು ಕೂಲಂಕಷವಾಗಿ ಯೋಚನೆ ಮಾಡಿಲ್ಲ ಎಂದು ಹೇಳುತ್ತೇನೆ. ಶ್ರೀ ಎ. ಆರ್. ಪಾಟೀಲರು ಹೇಳಿದರು, ನೀವು ನಾಲ್ಕು ಎಕರೆ ಜಮೀನನ್ನು ಕೊಡಿ, ನಾನು ನಿಮಗೆ 40 ಎಕರೆ ಜಮೀನು ಕೊಡುತ್ತೇನೆಂದು. ಆದ್ದರಿಂದ ಎಲ್ಲಾ ಜಮೀನುಗಳನ್ನು ಒಂದೇ ರೀತಿ ಕಂಪೇರ್ ಮಾಡಬೇಡಿ. ಇದರಿಂದ ಬಹಳ ದುಷ್ಪರಿಣಾಮ ಉಂಟಾಗುತ್ತದೆ. ಶ್ರೀ ಕೇಶವಮೂರ್ತಿಯವರು ಏನು ಒಂದು ಅಮೆಂಡ್‌ಮೆಂಟ್ ತಂದಿದ್ದಾರೆ ಅದು ಸರಿಯಾಗಿದೆಯೆಂದು ಹೇಳುತ್ತೇನೆ. Clause 12 (3) is like this :

Scheme to provide for compensation :

"When a holding of greater market value than that of his original holding is allotted to an owner, the State Government may grant a loan to him to the extent of the amount of compensation he has to pay under sub-section (1) the loan being made repayable with such interest and in such annual instalments as may be prescribed".

ಇದು ಏತಕ್ಕೆಂದು ಕೇಳುತ್ತೇನೆ. ಈ ದಿನ ಬೆಳಿಗ್ಗೆ ರಾಮಕೃಷ್ಣ ಹೆಗ್ಡೆ ಅವರು ಓವರ್ ಡ್ರಾಫ್ಟ್ ವಿಚಾರ ಹೇಳಿದರು. ಸರ್ಕಾರದಲ್ಲಿ ಹಣವಿಲ್ಲವೆಂದು ಹೇಳಿದರು. ನಿಮಗೆ ಹಣ ಎಲ್ಲಿಂದ ಬರುತ್ತದೆ ? ರೈತರುಗಳಿಂದ. ರೈತರನ್ನು ನೀವು ಸರಿಯಾಗಿ ನೋಡಿಕೊಳ್ಳಬೇಕು. ಒಬ್ಬ ಭಿಕ್ಷುಕ ಹಣಸೇ

ಮರದಡಿ ಮಲಗಿಕೊಂಡು, ನಾನು ಮದುವೆಯಾಗುತ್ತೇನೆ, ನೆಂಟರಿಷ್ಟರು ಬರುತ್ತಾರೆ, ಮಕ್ಕಳಾಗುತ್ತವೆ, ಸಾವುಕಾರನಾಗುತ್ತೇನೆ ಎಂಬುದಾಗಿ ಕನಸು ಕಂಡನಂತೆ, ಅದರಂತೆ ನೀವು ಯೋಚನೆ ಮಾಡಿಕೊಂಡು ಈ ಬಿಲ್ಲನ್ನು ತಂದಿರಬಹುದು. ಇವತ್ತು ರೈತರಿಗೆ ಹಂಚಲು ಜಮೀನು ಇಲ್ಲವೆಂದು ಹೇಳುತ್ತೀರಿ. ಇವತ್ತು ಕೆರೆ, ಕುಂಟೆ, ನದಿ, ಕೊಳದ ಸುತ್ತಮುತ್ತಲಿರುವ ಜಮೀನೆಲ್ಲವನ್ನೂ ರೈತರಿಗೆ ಕೊಟ್ಟಿದ್ದೇವೆ. ಅಮೃತಮಹಲ್‌ಗಾಗಿ ಇಟ್ಟಿದ್ದ ಜಮೀನನ್ನು ಸಹ ರೈತರಿಗೆ ಕೊಟ್ಟಿದ್ದೇವೆ. ಸಾವಿರಾರು ಎಕರೆ ಅರಣ್ಯವನ್ನು ಕಡಿದು ಆ ಜಮೀನನ್ನು ಸಹ ರೈತರಿಗೆ ಸಾಗುವಳಿಗಾಗಿ ಕೊಟ್ಟಿದ್ದೇವೆಂದು ಹೇಳುತ್ತೀರಿ. ಆದರೂ ಸಹ ನಿರುದ್ಯೋಗ ತಪ್ಪಲಿಲ್ಲ. ಅದರ ಜೊತೆಗೆ ಈ ಬಿಲ್ಲನ್ನು ತಂದು ಮತ್ತಷ್ಟು ಜನರಿಗೆ ನಿರುದ್ಯೋಗವನ್ನು ಉಂಟು ಮಾಡುತ್ತಿದ್ದೀರಿ. ಇದು ಸರಿಯಲ್ಲ. ನೀವು ಸಹ ರೈತರ ಮಕ್ಕಳಾಗಿದ್ದೀರಿ. ರಾಜಸ್ವ ಸಚಿವರಾಗಿದ್ದೀರಿ. ನಿಮಗೂ ರೈತರ ಕಷ್ಟಸುಖಗಳು ಗೊತ್ತಿದೆ. ಐ. ಎ ಎಸ್. ಮತ್ತು ಐ. ಸಿ. ಎಸ್. ಅಧಿಕಾರಿಗಳು ವಿಧಾನಸೌಧದಲ್ಲಿ ಕುಳಿತು ಕಾನೂನು ಮಾಡಿದರೆಂದು, ನೀವು ಯೋಚನೆ ಮಾಡದೆ ಅದನ್ನು ಜಾರಿಯಲ್ಲಿ ತರಬೇಡಿ. ನಿಮಗೆ ರೈತರಿಂದಲೇ ಹಣ ಬರಬೇಕು. ಇಲ್ಲವಿದ್ದರೆ ಹಣಕ್ಕಾಗಿ ಯಾರ ಹತ್ತಿರ ಹೋಗುತ್ತೀರಿ? ಆದ್ದರಿಂದ ಈಗ ಏನು ಒಂದು ಈ ಬಿಲ್ಲನ್ನು ತಂದಿದ್ದೀರಿ ಅದನ್ನು ಸೆಲೆಕ್ಟ್ ಸಮಿತಿಯವರು ಕೂಲಂಕಷವಾಗಿ ತೀರ್ಮಾನ ಮಾಡಬೇಕೆಂದು ಮತ್ತೊಮ್ಮೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅಧ್ಯಕ್ಷರು ಅಪ್ಪಣೆ ಕೊಡಿಸಿದಾಗ ಮುಂದಿನ ತಿಂಗಳು 4ನೇ ತಾರೀಖಿನವರೆಗೆ ಈ ಸಭೆ ನಡೆಯುತ್ತದೆ. ಆದ್ದರಿಂದ ನಿಧಾನವಾಗಿ ಈ ಬಿಲ್ಲನ್ನು ಪಾಸ್ ಮಾಡೋಣ. ಸ್ವಲ್ಪ ಯೋಚನೆ ಮಾಡುವುದಕ್ಕೆ ಅವಕಾಶ ಕೊಟ್ಟು ಮುಂದಿನ ತಿಂಗಳು ಮೂರು ಅಥವಾ ನಾಲ್ಕನೇ ತಾರೀಖು ತೀರ್ಮಾನ ಕೈಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

† ಶ್ರೀ ವಿ. ಎಂ. ದೇವ್ (ಗುಬ್ಬಿ).—ಮಾನ್ಯ ಸಭಾಪತಿಗಳೇ, ಮಾನ್ಯ ರೆವಿನ್ಯೂ ಸಚಿವರು ಹೇಳಿದರು ಇದರ ವ್ಯಾಪ್ತಿ ಬಹಳ ದೂರದ್ದಾಗುತ್ತದೆ, ರೆವಲ್ಯೂಷನರಿಯಾಗುತ್ತದೆಂದು ಹೇಳಿದರು. ಇದು ಒಂದು ವಿಧದಲ್ಲಿ ಕೌಂಟರ್ ರೆವಲ್ಯೂಷನರಿಯಾಗುತ್ತದೆ. ಏಕೆಂದರೆ, ಇಬ್ಬರು ಅಣ್ಣತಮ್ಮಂದಿರು ಇದ್ದರೆ, ಅವರಿಗೆ 7 ಎಕರೆ ಜಮೀನು ಇದ್ದರೆ, ಹಂಚಿಕೊಳ್ಳುವಾಗ ಒಬ್ಬನು ಜಮೀನನ್ನು ಬಿಟ್ಟು ಬಿಡಬೇಕಾಗುತ್ತದೆ. ಇದರಿಂದ ಅಣ್ಣತಮ್ಮಂದಿರಲ್ಲಿ ಒಬ್ಬನ ಜೀವನವನ್ನು ತೆಗೆದು ಹಾಕಿದಹಾಗೆ ಆಗುತ್ತದೆ. ಉದಾಹರಣೆಗೆ ಹೇಳುವುದಾದರೆ, ವಿಧಾನಸೌಧದ ಬಳಿ ಒಬ್ಬ ಕಾಕ ಅಂಗಡಿಯನ್ನು ಇಟ್ಟಿದ್ದ. ಸರ್ಕಾರದವರು ಅವನನ್ನು ಅಂಗಡಿ ಬಿಟ್ಟು ಹೋಗುವಂತೆ ಹೇಳಿದರು. ಅವನು ಬಿಡದೆ ಹೈಕೋರ್ಟಿಗೆ ಹೋದ. ಅಲ್ಲಿ ನನ್ನ ಜೀವನೋಪಾಯಕ್ಕೆ ತೊಂದರೆಯಾಗುತ್ತದೆ, ಬೇರೆ ಕಡೆ ಅಂಗಡಿಗೆ ಜಾಗವನ್ನು ಕೊಡಿಸಿ ಎಂದು ಹೇಳಿದ. ಅದೇ ರೀತಿ ಹೈಕೋರ್ಟಿನವರು ತೀರ್ಪನ್ನು ಕೊಟ್ಟರು. ಆಗ ಸರ್ಕಾರದವರು ಬೇರೆ ಜಾಗದಲ್ಲಿ ಅಂಗಡಿ ಕಟ್ಟಿಕೊಟ್ಟರು. ಅದೇ ರೀತಿ ಜಮೀನು ಸಿಗದಿದ್ದವನಿಗೆ ಬೇರೆ ಕೆಲಸ ಕೊಡಬೇಕು. ನಮ್ಮ ರಾಜ್ಯಾಂಗದ ಪ್ರಕಾರ ಆಶ್ರಯ ಕೊಡಬೇಕಾಗುತ್ತದೆ. ಅದಕ್ಕೆ ಈಗ ಏನಾದರೂ ಒಂದು ಯೋಚನೆಯನ್ನು ಮಾಡಬೇಕು.

5-00 P.M.

ಸರ್ಕಾರದವರು ಅವನಿಗೆ ಜೀವನೋಪಾಯಕ್ಕೆ ತಕ್ಕ ಅವಕಾಶ ಕಲ್ಪಿಸಿ ಕೊಡುವ ಜವಾಬ್ದಾರಿಯನ್ನು ಹೊರದೇ ಇದ್ದರೆರಾ ಜ್ಯಾಂಗಕ್ಕೆ ಬಹಳ ತೀವ್ರ ವ್ಯತಿರಿಕ್ತವಾಗುತ್ತದೆ. ಮೂಕ ಪ್ರಾಣಿಗಳ ಬಗ್ಗೆ ಅನೇಕ ಜನ ರೈತರು ಕೋರ್ಟಿಗೆ ಹೋಗುವುದಿಲ್ಲ. ಆದರೂ ಕೂಡ ಇಂತಹ ಕಾನೂನುಗಳನ್ನು ಮಾಡಿ ಅವರು ಕೋರ್ಟಿಗೆ ಹೋಗುವ ಹಾಗೆ ಮಾಡಿದ ಹಾಗಾಗುತ್ತದೆ. ಅಲ್ಲದೆ ತೀವ್ರವಾಗಿ ನಾವು ಕಾನೂನನ್ನು ವೈಯಲೇಟ್ ಮಾಡಿದ ಹಾಗಾಗುತ್ತದೆ. ಈ ದೃಷ್ಟಿಯಿಂದ ನನಗನ್ನಿಸುತ್ತದೆ: ಈ ಮಸೂದೆಯನ್ನು ತಂದಂತಹವರಿಗೆ ಯಾವ ಒಂದು ಗುರಿಯೇ ಇಲ್ಲ ಇದನ್ನು ಕಮಿಟಿಯವರು ವಿಚಾರಮಾಡಿ ಚೆನ್ನಾಗಿ ಆಲೋಚಿಸಿ ಎಷ್ಟೆಷ್ಟು ಮಾಡಬೇಕಾಗಿತ್ತೋ ಅಷ್ಟನ್ನು ದೀರ್ಘವಾಗಿ ಪರಿಶೀಲನೆ ಮಾಡಲಿಲ್ಲ. ಇಂಥಾದ್ದನ್ನು ರಚನೆ ಮಾಡುವಾಗ ಪ್ರಾಣಿಗಳ ರಕ್ಷಣಾ ತತ್ವದ ಗುರಿ ಇಲ್ಲದೆ ಇವರು ಸುಮ್ಮನೆಕುಳಿತುಕೊಂಡು ಏನೋ ಒಂದು ಮಸೂದೆ ರಚನೆ ಮಾಡೋಣವೆಂಬುದಾಗಿ ಮಾಡಿದರೆ ಏನು ಪ್ರಯೋಜನ? ನಾವು ಮೆಜಾರಿಟಿಯಲ್ಲಿದ್ದೇವೆ, ಏನು ಬೇಕಾದರೂ ಮಾಡಬಹುದು ಎಂದು ಇವರು ಮಾಡಬಾರದು. ಇವರಿಗೆ whether there is enough thought ಎಂದು ಕೇಳಬೇಕಾಗಿದೆ. Enough thoughtಗೆ ಮಾನ್ಯತೆ ಕೊಡದಿದ್ದರೆ ಬಹಳ ತಪ್ಪಾಗುತ್ತದೆ. ಈ ವಿಷಯವನ್ನು ತೀವ್ರವಾಗಿ ಯೋಚನೆ ಮಾಡಬೇಕು. ಇದರಲ್ಲಿ ಬಹಳವಾಗಿ ನ್ಯೂನತೆಗಳಿರುವುದರಿಂದ ಎಲ್ಲವನ್ನೂ ನಾನು ಕಾಲಾವಕಾಶವಿಲ್ಲದೆ ಹೇಳುವುದಕ್ಕೆ ಹೋಗುವುದಿಲ್ಲ. ನನ್ನ ಸಲಹೆಗಳಿಗೆ ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಅಧ್ಯಕ್ಷರೇ, ಮಾನ್ಯ ಸದಸ್ಯರು ಕೊಟ್ಟ ಸ್ವಾಗತಕ್ಕೋಸ್ಕರ ಅವರನ್ನು ವಂದಿಸುತ್ತಾ ಒಬ್ಬೊಬ್ಬ ಮಾನ್ಯ ಸದಸ್ಯರು ವ್ಯಕ್ತಪಡಿಸಿದ ಸಂಶಯಗಳೂ ಕೂಡ ಸ್ವಾಗತಾರ್ಹ ವಾಗಿವೆ. ಏಕೆಂದರೆ ಅವರು ಈ ಆಕ್ಟ್‌ನ್ನು ಪೂರ್ತಿ ಓದುವುದಕ್ಕೆ ಕಾಲಾವಕಾಶವಿಲ್ಲದೆ ಹೋಯಿತು ಎಂಬುದಾಗಿ ಮಾನ್ಯ ಸದಸ್ಯರಾದ ಶ್ರೀ ಮುಕ್ಕಣ್ಣಪ್ಪನವರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಸದಸ್ಯರು ಕೆಲವರು ಇದನ್ನು ಓದುವುದಕ್ಕೆ ಕಾಲಾವಕಾಶವಿರಲಿಲ್ಲ; ನಾಲ್ಕೈದು ದಿವಸ ಗಳಾದರೂ ಅವಕಾಶ ಕೊಡಿ ಎಂದು ಕೇಳಿದರು. ಅವರು ಅದನ್ನು ಚೆನ್ನಾಗಿ ಓದಲಿಲ್ಲವೆಂದು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಮೊಟ್ಟಮೊದಲನೆಯದಾಗಿ ಈ ಕಾನೂನನ್ನು ನಾವು ತಂದುದಲ್ಲ. ರೈತರ ಮಕ್ಕಳು ಇದನ್ನು ತಂದರು. ಈಗಾಗಲೇ ಇದನ್ನು ಮೈಸೂರು ದೇಶದ ಬೊಂಬಾಯಿ ಕರ್ಣಾಟಕದಲ್ಲಿ 47 ನೇ ಇಸವಿಯಲ್ಲಿ ತಂದಿದ್ದಾರೆ. 1947 ರಿಂದ ಸುಮಾರು 19-20 ವರ್ಷ ಗಳಿಂದಲೂ ಇದು ಅಲ್ಲಿ ಜಾರಿಯಲ್ಲಿದೆ. ಆದರೆ ಇದರಿಂದ ಏನೂ ಅಂತಹ ದೊಡ್ಡ ಅನಾಹುತಗಳು ಆದುದು ನನ್ನ ಗಮನಕ್ಕೆ ಬಂದಿಲ್ಲ. ಏನೋ ಅಲ್ಲಿ ಇಲ್ಲಿ ಸಣ್ಣ ಕಿರುಕುಳಗಳಾಗುತ್ತಿವೆ. ಬೊಂಬಾಯಿ ಕರ್ಣಾಟಕದಿಂದ ಬಂದಿರತಕ್ಕ ಸದಸ್ಯರು ಮತ್ತು ಇತರೇ ಸದಸ್ಯರು ಆ ಬಗ್ಗೆ ಕೊಟ್ಟಿರತಕ್ಕ ಸಲಹೆ ಗಳನ್ನು ಪಡೆದ ಈಗಿರತಕ್ಕ ಕಾನೂನುಗಳ ಕಠಿಣ ನೀತಿಯನ್ನು ಬಹಳಮಟ್ಟಿಗೆ ಕಡಮೆಮಾಡಿದೆ. ಇದನ್ನು ನಾವು ಮಾತ್ರ ತಂದದ್ದಲ್ಲ. ಇದು ಬೊಂಬಾಯಿ ಕರ್ಣಾಟಕಕ್ಕೇ ಮಾತ್ರವಲ್ಲ, ಕನ್ನಡ ದೇಶಕ್ಕೆ ಮಾತ್ರವಲ್ಲ, ದೇಶದಲ್ಲಿ ಯೂನಿಫಾರಂ ಲೆಜಿಸ್ಲೇಷನ್ ಎಲ್ಲಾ ಕಡೆಯೂ ಮಾಡುತ್ತಾ ಬಂದಿದ್ದೇವೆ. ಬಹುಶಃ ಅವುಗಳ ಪೈಕಿ ಇದೂ ಒಂದು. ಯಾವುದೆಂದರೆ Uniformity of legislation in Karnatak. ಕನ್ನಡದಲ್ಲಿ ಹೇಳಿದರೆ ಉತ್ತರ ಬೊಂಬಾಯಿ ಕರ್ಣಾಟಕದಲ್ಲಿ ಇರುವುದನ್ನು ಬೇರೆ ಭಾಗಗಳಿಗೂ ಅನ್ವಯಿಸುವಂತೆ ಕಾನೂನುಗಳನ್ನು ಜಾರಿಗೆ ತರುತ್ತಿದ್ದೇವೆ ಎಂಬುದು. ಇದನ್ನು ಇಲ್ಲಿ ತರುವಾಗ ಅದರ aims and objects ಎಲ್ಲವೂ ಚರ್ಚೆಯಾಗಿದೆ. ಆಗಿನ ಮಾನ್ಯ ಸದಸ್ಯರು ಬಹಳ ಬುದ್ಧಿವಂತರು. ಅವರೆಲ್ಲರೂ ಬಹಳವಾಗಿ ಯೋಚನೆಮಾಡಿ ಈ ಕಾನೂನನ್ನು ಪಾಸ್ ಮಾಡಿದ್ದಾರೆ. ಇದರಲ್ಲಿ ಎರಡು ವಿಷಯಗಳಿವೆ. ಮಾನ್ಯ ಸದಸ್ಯರು ಯಾರೂ ಅದನ್ನು ಚೆನ್ನಾಗಿ ಅರ್ಥಮಾಡಿಕೊಂಡಂತೆ ಕಾಣಲಿಲ್ಲ. Prevention of Fragmentation and consolidation of holdings. ಈಗಿರುವ ಫ್ರಾಗ್‌ಮೆಂಟಿಗೆ ಏನೂ ತೊಂದರೆ ಇಲ್ಲ. ಆ ಒಂದು ವಿಷಯವನ್ನು ಮುಖ್ಯವಾಗಿ ಹೇಳುತ್ತೇನೆ. The fundamental point is, nobody will lose land by consolidation. That is the fundamental thing which one should not forget. ಇಲ್ಲಿ ಒಂದು ತುಕಡಿ ತೆಗೆದುಕೊಂಡರೆ ಇನ್ನೊಂದು ಕಡೆ ಇನ್ನೊಂದು ತುಕಡಿ ಬರುತ್ತದೆ. ಕನ್‌ಸಾಲಿಡೇಷನ್ನಿನಿಂದ ಯಾರೂ ಜಮೀನನ್ನು ಕಳೆದುಕೊಳ್ಳುವುದಿಲ್ಲ. ಈ ವಿಷಯವನ್ನು ನಾನು ಪದೇ ಪದೇ ಹೇಳಿದ್ದೇನೆ. ಅದನ್ನು ಈಗ ಪುನಃ ಒತ್ತಿ ಹೇಳುವ ಪ್ರಮೇಯವೇ ಇಲ್ಲ. ಫ್ರ್ಯಾಗ್‌ಮೆಂಟೇಷನ್ ಮತ್ತು ಕನ್‌ಸಾಲಿಡೇಷನ್ ಮಾಡುವ ಪ್ರೋಸೆಸ್ಸಿನಲ್ಲಿ ಅಷ್ಟೇ ತುಕಡಿ ಯಷ್ಟು ಇನ್ನೊಂದು ತುಕಡಿ ಕೊಡುತ್ತಾರೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಎಲ್ಲಿ ಕೊಡುತ್ತಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ ಆಕ್ಟ್‌ನ್ನು ಮತ್ತೊಂದು ಸಾರಿ ಚೆನ್ನಾಗಿ ಓದಿ. ಮೊದಲೇ ಆಗಿರತಕ್ಕ ಫ್ರಾಗ್‌ಮೆಂಟೇಷನ್ನಿಗೂ ಕೂಡ ಏನೂ ಜಮೀನನ್ನು ಕಳೆದುಕೊಳ್ಳುವುದಿಲ್ಲ. ಮುಂದೆ ಫ್ರಾಗ್‌ಮೆಂಟೇಷನ್ ಮಾಡುವಾಗ ಇಂತಹ ತುಕಡಿಗಳು ಬಾರದಂತೆ ಮಾಡುವುದಕ್ಕೆ ಈ ಕಾನೂನು. ಈಗಿರುವ ತುಕಡಿಗಳನ್ನು ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಮಾಡಬಹುದು. ಪೂರ್ತಿಯಾಗಿ ಒಂದು ಹಳ್ಳಿಯನ್ನೇ ಮಾಡುವುದಕ್ಕಾಗುವುದಿಲ್ಲ. ಫ್ರಾಗ್‌ಮೆಂಟೇಷನ್ ಅದು ಒಂದನ್ನು ಮಾಡುವುದಕ್ಕೆ ಪ್ರಯತ್ನಪಡಬಹುದು. ಕನ್‌ಸಾಲಿಡೇಷನ್ ಪ್ರೋಸೆಸ್ ಮಾಡುವಾಗ ಯಾರಿಗೂ ಕಷ್ಟವಾಗುವುದಿಲ್ಲ. ಒಂದು ಕಡೆ ಇನ್‌ಫೀರಿಯರ್ ಲ್ಯಾಂಡ್ ಸಿಕ್ಕಿದರೆ ಇನ್ನೊಂದು ಕಡೆ ಸುಪೀರಿಯರ್ ಲ್ಯಾಂಡ್ ಸಿಗುವುದಕ್ಕೆ ಅನುಕೂಲವಾಗುತ್ತದೆ. ಅದನ್ನು ಪಂಚಾಯಿತಿದಾರರು ಚರ್ಚೆಮಾಡುತ್ತಾರೆ. ಒಂದು ಕಡೆ ತುಕಡಿ ಹೋದರೆ ಅಥವಾ ಇನ್‌ಫೀರಿಯರ್ ತುಕಡಿ ಸಿಕ್ಕಿದರೆ ಆ ತುಕಡಿಯಲ್ಲಿ ಎಷ್ಟು ಕಳೆದು ಕೊಳ್ಳುತ್ತಾರೋ ಅಷ್ಟನ್ನು ಕಂಪೆನ್ಸೇಷನ್ ರೂಪದಲ್ಲಿ ಕೊಡಬೇಕೆಂದು ಪಂಚಾಯತಿದಾರರಿಗೆ ನಿಗದಿಮಾಡಲು ಕೊಡುತ್ತಾರೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಕ್ಲಾಜು (11) (2) (ಬಿ) ಯಲ್ಲಿರುವುದನ್ನು ಮಾನ್ಯ ಮಂತ್ರಿಗಳು ಓದಿದರೆ ಗೊತ್ತಾಗುತ್ತದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ಅದನ್ನು ನೋಡಿಲ್ಲವೆಂದು ಅವರಿಗೆ ಹೇಳು ತ್ತಿದ್ದೇನೆ. ಯಾರೂ ಕನ್‌ಸಾಲಿಡೇಷನ್ ಪ್ರೋಸೆಸ್ಸಿನಲ್ಲಿ ಜಮೀನನ್ನು ಕಳೆದುಕೊಳ್ಳುವುದಿಲ್ಲವೆಂದಿದೆ.

ಒಂದು ಕಡೆ ಅವನು ಕಳೆದುಕೊಂಡರೆ ಇನ್ನೊಂದು ಕಡೆ ಅವನಿಗೆ ಕೊಡುತ್ತಾರೆ. ನನ್ನದು ಬೊಂಬಾಯಿ ಕರ್ಣಾಟಕದಲ್ಲಿ ಒಂದು ತುಕಡಿ ಇದೆ; ಅದು ಪೂರ್ವ ಪಶ್ಚಿಮದಲ್ಲಿದೆ. ನನ್ನ ಸ್ನೇಹಿತರದು ಒಂದು ತುಕಡಿ ಪಕ್ಕದಲ್ಲಿ ಒಂದಿದೆ. ಈ ಮೂರು ಸ್ಥಳಗಳಲ್ಲಿಯೂ ಇರುವುದಕ್ಕೆ ಬದಲು ಒಂದು ಸ್ಥಳದಲ್ಲಿಯೇ ಮಾಡಬಹುದು. ಮೂರು ಎಕರೆಗಳೂ ಮೂರು ಸ್ಥಳಗಳಲ್ಲಿವೆ. ಅದನ್ನು ಬದಲಾಯಿಸಿ ಒಂದೇ ಸ್ಥಳದಲ್ಲಿ ಆ ಮೂರು ಎಕರೆಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡಬಹುದು. ನನ್ನ ಈ ಮೂರು ತುಕಡಿಗಳನ್ನು ಯಾರು ಬೇಕಾದರೂ ತೆಗೆದುಕೊಳ್ಳಲಿ. ಅವರಿಗೇ ಕೊಡುತ್ತೇನೆ. ಬೊಂಬಾಯಿ ಕರ್ಣಾಟಕದಲ್ಲಿ ಈ ವಿಚಾರ ಮೊದಲು ಬಂದಾಗ ನಮಗೂ ಅರ್ಥವಾಗಲಿಲ್ಲ. ಆಗ ಸೆಲೆಕ್ಟ್ ಕಮಿಟಿಯಲ್ಲಿ ಒಂದು ಬ್ಲ್ಯಾಕ್‌ಬೋರ್ಡ್ ಇಟ್ಟುಕೊಂಡು ವಿಚಾರ ಮಾಡಲಾಯಿತು. ನಾವು ಬಹಳ ಬುದ್ಧಿವಂತರಾಗಿದ್ದರೂ ಕೂಡ ನಮಗೂ ಮಾನ್ಯ ಸದಸ್ಯರುಗಳ ಹಾಗೆ ಪ್ರಾರಂಭದಲ್ಲಿ ಇದು ಅರ್ಥವಾಗಲೇ ಇಲ್ಲ. ಆಗ ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿ ಕಳುಹಿಸಿ ಅವರು ಬ್ಲ್ಯಾಕ್‌ಬೋರ್ಡಿನಲ್ಲಿ ಅವನ್ನೆಲ್ಲಾ ಬರೆದು ತೋರಿಸಿ ಅದರ ಮೇಲೆ ಸೀಮೆಸುಣ್ಣ ದಿಂದ ಎ. ಬಿ. ಸಿ. ಮಾರ್ಕ್‌ಮಾಡಿ ಮೂರು ಎಕರೆಗಳನ್ನು ಮೂರು ಸ್ಥಳಗಳಲ್ಲಿ ಗುರ್ತು ಹಾಕಿ ಅದರಲ್ಲಿ ಯಾರಿಗೂ ಕಡಮೆಯಾಗುವುದಿಲ್ಲ, ಅನ್ಯಾಯವಾಗುವುದಿಲ್ಲವೆಂಬುದನ್ನು ವಿವರವಾಗಿ ತಿಳಿಸಿದರು. ಅಧ್ಯಕ್ಷರು ಅಪ್ಪಣೆ ಕೊಡುವುದಾದರೆ ಈ ವಿಚಾರದಲ್ಲಿ ಒಂದು ತರಗತಿಯನ್ನು ನಾಳೆಯೇ ಮಾಡಿಸಿ ಅವುಗಳನ್ನು ವಿವರಿಸಬಹುದು. This much is certain that under the consolidation process, nobody will lose the land. I am prepared to prove it tomorrow and my officers are prepared to explain to you.

SRI K. P. REVANNASIDDAPPA (Tiptur).—Youy ourself will prove or your Officers ?

SRI M. V. KRISHNAPPA.—I myself will do it. If I am not capable of proving it, there is nothing wrong in taking the help of my Officers.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಕನ್‌ಸಾಲಿಡೇಟ್ ಮಾಡಿದರೆ ಹೋಲ್ಡಿಂಗ್ಸ್ ಸಂಖ್ಯೆ ಕಡಮೆಯಾಗುವುದಿಲ್ಲವೇ ? ಎಕರೇಜ್ ಹೋಗುವುದಿಲ್ಲವೇ ?

SRI M. V. KRISHNAPPA.—I have got 3 acres of land and it is spread out in 3 places. Under the process, I will be given 3 acres in one place. ನನ್ನ ಪಕ್ಕದಲ್ಲಿರುವವರದು ಯಾರದೋ ತೆಗೆದು ನನಗೆ ಕೊಟ್ಟರು. ನನ್ನದು ಎಲ್ಲೋ ಇತ್ತಲ್ಲಾ ಅದೊಂದು ತುಕಡಿಯನ್ನೂ ಸಹ ಕೊಟ್ಟರು.

ಭೂ ಹಿಡುವಳಿಯನ್ನು ತುಂಡು ಮಾಡುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಫ್ರಾಗ್ಮೆಂಟ್ ಇಷ್ಟೇ ಇರಬೇಕೆಂದು ನಾವು ಯೋಚನೆಮಾಡಿ ಮಾಡಿದ್ದೇವೆ. ಬೊಂಬಾಯಿ ಕರ್ನಾಟಕದಲ್ಲಿ ಒಂದು ಪದ್ಧತಿ ಇತ್ತು. ಬೇರೆ ಭಾಗದಲ್ಲಿ ಒಂದು ಪದ್ಧತಿ ಇತ್ತು. ಆದುದರಿಂದ ಇಡೀ ರಾಜ್ಯಕ್ಕೆಲ್ಲಾ ಒಂದೇ ಸ್ಟ್ಯಾಂಡರ್ಡ್ ಅನುಸರಿಸೋಣ ಎಂದು ಭೂಸುಧಾರಣಾ ಕಾನೂನಿನಲ್ಲಿ ಸ್ಟ್ಯಾಂಡರ್ಡ್ ಎಕರೆ ಎಷ್ಟಿತ್ತೋ ಅದನ್ನೇ ಇದರಲ್ಲಿ ಡಿಫೈನ್ ಮಾಡಿದ್ದೇವೆ.

ಕೆಲವು ಮಾನ್ಯ ಸದಸ್ಯರು ಈ ವಿಧೇಯಕದಲ್ಲಿ ವಿಭಜನಾಮಿತಿ ನಾಲ್ಕು ಸ್ಟ್ಯಾಂಡರ್ಡ್ ಎಕರೆ ಗಳೆಂದು ಗೊತ್ತು ಮಾಡಿರುವುದು ಹೆಚ್ಚು ಎಂದು ಹೇಳಿದರು. 7ನೇ ಕ್ಲಾಸಿನ ಭೂಮಿ 4 ಎಕರೆ ಬರುತ್ತದೆ. ಈಗ ನಮ್ಮ ಮೈಸೂರಿನಲ್ಲಿ ಪಾವಗಡ ಮತ್ತು ಸಿರಾ ಈ ಪ್ರದೇಶಗಳಲ್ಲಿ 7ನೇ ಕ್ಲಾಸಿನ ಭೂಮಿಗೆ 2 ಆಣೆ ಕಂದಾಯವನ್ನು ಕೊಡುತ್ತಿದ್ದಾರೆ. ಆ ಮೇಲೆ ಶ್ರೀಮಾನ್ ಮುಕ್ಕಣ್ಣಪ್ಪನವರು ನಾಲ್ಕು ಎಕರೆ ತೆಂಗಿನ ತೋಟ ನಾಲ್ಕನೇ ಕ್ಲಾಸಿನ ಭೂಮಿಯಲ್ಲಿ ಬರುತ್ತದೆ ಎಂದು ಹೇಳಿದರು. ಅದು ಇರಿಗೇಟೆಡ್ ಅಂಡರ್ ಅದರ್ ಸೋರ್ಸಸ್ ಎಂದು ಆಗುತ್ತದೆ. ಅದರ್ ಸೋರ್ಸಸ್‌ನಲ್ಲಿ ಬಾವಿ ಬರುತ್ತದೆ. ಎಂದು ಡಿಫೈನ್ ಮಾಡಿ ಹೇಳಿದೆ. 3ನೇ ಕ್ಲಾಸಿನ ಭೂಮಿ 4ನೇ ಕ್ಲಾಸಿನ ಭೂಮಿ ಗಳು ಇರಿಗೇಟೆಡ್ ಅಂಡರ್ ಅದರ್ ಸೋರ್ಸ್‌ನಲ್ಲಿ ಬರುತ್ತೇವೆ. ನಾವು ಈ ಕಾನೂನನ್ನು ಒಳ್ಳೆಯ ಉದ್ದೇಶಕ್ಕೋಸ್ಕರ ಮಾಡುತ್ತಿದ್ದೇವೆ. ಅಜ್ಞಾನವಿರತಕ್ಕ ರೈತರಿಗೆ ಸ್ವಲ್ಪ ಮಟ್ಟಿಗೆ ತೊಂದರೆಯಾಗ ಬಹುದು. ನಾನು ಮತ್ತು ಶ್ರೀಮಾನ್ ಎಂ. ಆರ್. ಪಾಟೀಲ್ ಅವರೂ ಕೂಡ ಯೋಚನೆ ಮಾಡಿ ಈ ಮಸೂದೆಯಲ್ಲಿ ಇದ್ದಂಥ ಕಠಿಣತೆಯನ್ನು ಹೋಗಲಾಡಿಸುವುದಕ್ಕೆ ಎಷ್ಟು ಬೇಕೋ ಅಷ್ಟು ಪ್ರಯತ್ನ ವನ್ನು ನಾವು ಮಾಡಿದ್ದೇವೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಇದನ್ನು ಹಳೆಯ ಮೈಸೂರಿನಲ್ಲಿಯೂ ಈಗಲೇ ಜಾರಿಗೆ ತರುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಒಟ್ಟಿನಲ್ಲಿ ಒಂದೇ ಸಲ ಮೈಸೂರು ದೇಶದಲ್ಲೆಲ್ಲಾ ಜಾರಿಗೆ ತರುತ್ತಿಲ್ಲ. ಎಲ್ಲಾ ಕನ್‌ಸಾಲಿಡೇಷನ್ನಿಗೂ ನಾವು ಕೈ ಹಾಕುತ್ತಾ ಇಲ್ಲ. ಯೂನಿಫಾರಂ ಲೆಜಿಸ್ಲೇಷನ್ ಮಾಡಿದ ಮೇಲೆ ಅದು ಸಂಸ್ಥಾನಕ್ಕೆಲ್ಲಾ ಅನ್ವಯಿಸುತ್ತದೆ. ಆದರೂ ಕೂಡ ಎಲ್ಲವನ್ನೂ ಒಂದೇಸಲ ಮಾಡುವುದಿಲ್ಲ. ಅಷ್ಟು ಹಣವೂ ಕೂಡ ಈಗ ನಮ್ಮಲ್ಲಿ ಇಲ್ಲ. Taluk by taluk ತೆಗೆದುಕೊಂಡು ಸ್ಟೇಜ್ ಬೈ ಸ್ಟೇಜ್ ಸರ್ಕಾರದವರು ಅದನ್ನು ಮಾಡುತ್ತಾರೆ. ಸೆಲೆಕ್ಟ್ ಕಮಿಟಿಯ ಸದಸ್ಯರು ಈ ಮಸೂದೆಯನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಅನೇಕ ಸಲಹೆಗಳನ್ನು ಕೊಟ್ಟು ಇದನ್ನು ತಿದ್ದುಪಡಿ ಮಾಡಿದೆ. ಇದನ್ನು ಜಾರಿಗೆ ತಂದ ಮೇಲೆ ಅನೇಕರಿಗೆ ಇದರಿಂದ ತೊಂದರೆಯಾದರೆ ಇದನ್ನು ಬೇಕಾದರೆ ತಿದ್ದುಪಡಿ ಮಾಡೋಣ. We are going to bring amendments in the course of some months if we realise that it affects the large number of people. Certainly we will do that. It is better we can get ourselves acquainted with all the clauses. Therefore, let us hold classes for this purpose and get things clarified there, so that everybody gets himself acquainted with everything.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—Point of order, Sir. ಶಾಸನ ಸಭಾ ಸದಸ್ಯರಿಗೆ ಕ್ಲಾಸ್ ಮಾಡಬೇಕಾದರೆ ಮಾನ್ಯ ಮಂತ್ರಿಗಳಿಗೆ ಅಧಿಕಾರವನ್ನು ಕೊಟ್ಟವರು ಯಾರು ? ಮಾನ್ಯ ಮಂತ್ರಿಗಳು ಈ ಮಸೂದೆಯನ್ನು ಸರಿಯಾಗಿ ಓದಿಕೊಂಡು ಬಂದಿದ್ದಾರೆಯೋ ಹೇಗೇ ? ಶಾಸನ ಸಭಾ ಸದಸ್ಯರಾದ ನಮಗೆ ಕ್ಲಾಸ್ ಮಾಡಬೇಕಾದರೆ ನಾವೇನು ವಿದ್ಯಾರ್ಥಿಗಳೇ ? ಮಾನ್ಯ ಮಂತ್ರಿಗಳು ಬರಲಿ ಬೇಕಾದರೆ ಅವರಿಗೆ ಯಾವುದಾದರೂ ಒಂದು ಕಾಲೇಜಿನಲ್ಲಿ ಲೆಕ್ಚರರ್ ಕೆಲಸ ಕೊಡಿಸುತ್ತೇನೆ.

Mr. Speaker.—The point of order has been raised by the Hon'ble Member Sri K. P. Revannasiddappa. He should have bestowed greater thought before he raised it. The House is not concerned with the holding of any class. If the facilities are offered by the Hon'ble Minister to the members to understand the complicated question, that does not yield to a raising of a point of order.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಈ ಮಸೂದೆಯನ್ನು ಯಾವಾಗ ಜಾರಿಗೆ ಕೊಡಬೇಕೆಂದು ಉದ್ದೇಶಿಸಿದ್ದಾರೋ ಅದರೊಳಗೆ ಅದನ್ನು ಜಾರಿಗೆ ಕೊಡಲು ವ್ಯವಸ್ಥೆ ಮಾಡಿದ್ದಾರೆಯೇ? ನಿಜವಾಗಿಯೂ ಈ ಕಾಯಿದೆಯನ್ನು ಜಾರಿಗೆ ಕೊಡುವುದರಲ್ಲಿ ಸರ್ಕಾರದವರು ತೀವ್ರವಾಗಿ ಅಪೇಕ್ಷೆಪಟ್ಟಿದ್ದಾರೆಯೋ ಹೇಗೆ ? ಬರೀ ಯೋಜನಾ ಮಂಡಲಿಯವರು ಒತ್ತಾಯ ಮಾಡುತ್ತಾರೆಂದು ಇದನ್ನು ಕಾನೂನು ಮಾಡಿ ಬದಿಗೆ ಇಡಬೇಕೆಂದು ಅಭಿಪ್ರಾಯ ಪಟ್ಟಿದ್ದೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸರ್ಕಾರದವರು ಯೂನಿಫಾರಂ ಲೆಜಿಸ್ಲೇಷನ್ ತರಬೇಕೆಂಬ ಮೂಲ ಉದ್ದೇಶದಿಂದ ಈಗ ನಾವು ಇದನ್ನು ತಂದಿದ್ದೇವೆ. ಸಂಸ್ಥಾನಾ ಮಳೆ ಎಲ್ಲಾ ಒಂದೇ ಸಲ ಇದನ್ನು ಜಾರಿಗೆ ತರುವುದಕ್ಕಾಗುವುದಿಲ್ಲ. ರೆಕಾರ್ಡ್ಸ್ ಆಫ್ ರೈಟ್ಸ್ ಸಿದ್ಧ ಇರಬೇಕು. ಮತ್ತು ಸಾಕಷ್ಟು ಹಣ ಕೊಡಬೇಕು. ಆದ್ದರಿಂದ ಸರ್ಕಾರದವರು ಇದನ್ನು ಹಂತ ಹಂತವಾಗಿ ಒಂದೆರಡು ತಾಲ್ಲೂಕುಗಳನ್ನು ತೆಗೆದುಕೊಂಡು ಅವುಗಳನ್ನು ಪೂರ್ತಿ ಮಾಡಿಕೊಂಡು, ನಂತರ ಬೇರೆಯದನ್ನು ತೆಗೆದುಕೊಳ್ಳುತ್ತಾರೆ. ಬೊಂಬಾಯಿ ಕರ್ನಾಟಕದಲ್ಲಿ ಇದೇ ರೀತಿ ನಡೆದಿದೆ. ಮೊದಲು ಕೆಲವು ತಾಲ್ಲೂಕುಗಳನ್ನು ಆರಿಸಿಕೊಂಡು ಅದಕ್ಕೆ ಬೇಕಾದ ಕನ್‌ಸಾಲಿಡೇಟಿಂಗ್ ಆಫೀಸರನ್ನು ನೇಮಕ ಮಾಡಿಕೊಂಡು ಈ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ. ಆದ್ದರಿಂದ ಇಲ್ಲಿಯೂ ಸಹ ಹಾಗೆಯೇ ಮಾಡೋಣ ಎಂದು ಇದ್ದೇವೆ. ಹಂತ ಹಂತವಾಗಿ ಒಂದೆರಡು ತಾಲ್ಲೂಕುಗಳನ್ನು ತೆಗೆದುಕೊಂಡು ಈ ಕೆಲಸವನ್ನು ಮುಗಿಸಬೇಕು ಎಂದು ಉದ್ದೇಶವನ್ನು ಇಟ್ಟುಕೊಂಡಿದ್ದೇವೆ.

Mr. Speaker.—This Bill was considered by the House in great deal before it was referred to a Joint Select Committee mentioning the names of members of this House and inviting the other House to suggest the names of its members to represent on the committee. When detailed discussion

took place, I have no doubt that the members of the House were aware from the statement of objects and reasons, it is found that main features of the Bill are :

" (1) A plot of land of less extent than appropriate standard area which is not profitable for cultivation is considered a fragment,

(2) Future fragmentation of lands is prevented,

(3) Every holder will be given a compact area equivalent in value to what he held before in the scattered fields,

(4) Transfers or partitions which would result in creation of a fragment are prohibited.'

This is not with retrospective effect, but for the future. During the consolidation proceedings, nobody will become landless.

We have lived through the Bill till it went to the Select Committee and came back with a report. Never was this point raised earlier. Some thing suggests itself to some Members, forgetting all that took place on prior occasions and implications of what took place, namely, by implication that the principle has been accepted by the House and then it is sent to the Select Committee for detailed consideration with such modification as it feels. The scope for debate is with regard to the suggestions that have been made. I do not want to prevent debate if there was really a lacuna so that there may not be any difficulty in future. During the consolidation proceedings nobody will become landless, however small the holding may be, and big holders will not get enlarged holdings. The owner of a frangment can transfer such fragment to owners of contiguous survey numbers on payment of compensation to be determined by the Deputy Commissioner. If the contiguous owner refuses to take it, he can transfer it to the State. This principle is enunciated in the Statement of Objects and Reasons also.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಡಿಸ್ಟರ್ಬ್ ಹೇಗೆ ಆಗುವುದಿಲ್ಲ? ಒಂದು ಏರಿಯಾದಲ್ಲಿ ಕನ್‌ಸಾಲಿಡೇಷನ್ ಆಫ್ ಹೋಲ್ಡಿಂಗ್ಸ್ ಮಾಡುತ್ತೀರಿ, ಅಲ್ಲಿ 20 ಜನ ಫ್ರಾಗ್‌ಮೆಂಟ್ ಇಟ್ಟುಕೊಂಡಿರುವವರು ಇದ್ದಾರೆ ಎಂದು ಇಟ್ಟುಕೊಳ್ಳೋಣ. 20 ಜನರ ಹೋಲ್ಡಿಂಗ್ಸ್ ಕನ್‌ಸಾಲಿಡೇಟ್ ಮಾಡಿದರೆ, 20 ಜನರೂ ಫ್ರಾಗ್‌ಮೆಂಟ್ ಇಟ್ಟುಕೊಳ್ಳುವುದಕ್ಕೆ ಬರುವುದಿಲ್ಲ. ಕನ್‌ಸಾಲಿಡೇಟೆಡ್ ಮಿನಿಮಂ ಹೋಲ್ಡಿಂಗ್ಸ್ ಕೊಟ್ಟು, ಬಾಕಿಯದನ್ನು ಕೊಡುವುದಕ್ಕಾಗುವುದಿಲ್ಲ. ಫ್ರಾಗ್‌ಮೆಂಟ್ ಇದ್ದಂಥ ಜನಕ್ಕೆ ಎಲ್ಲರಿಗೂ ಪೂರ್ತಿ ಜಮೀನು ಕೊಡುವುದಕ್ಕಾಗುವುದಿಲ್ಲ. ಹಾಗೆ ಕೊಡಬೇಕಾದರೆ ಹೆಚ್ಚಿಗೆ ಜಮೀನು ಇರುವವರಿಂದ ಕಿತ್ತು ಫ್ರಾಗ್‌ಮೆಂಟ್ ಇರುವವರಿಗೆ ಮಿನಿಮಂ ಹೋಲ್ಡಿಂಗ್ಸ್ ಕೊಡಬೇಕಾಗುತ್ತದೆ. ಆ ರೀತಿ ಆಗುವುದಿಲ್ಲವೇ ಎಂದು ದಯವಿಟ್ಟು ತಿಳಿಸುತ್ತೀರಾ?

MR. SPEAKER.—Whatever is taken from somewhere is added and an equivalent area will be given.

SRI K. S. SURYANARAYANA RAO.—It is something like this : there are three people holding three acres. On consolidation proceedings, taking place, all these three people will have to be provided with five acres.

MR. SPEAKER.—Are we dealing with Leelavathi Ganitha or Bhasker Ganitha ? Where were the members when it was referred to the Select Committee ? Why did they not object to it then ? I will put it to the vote of the House. The question is :

"That the Mysore Prevention of Fragmentation and Consolidation of Holdings Bill, 1964, as reported by the Joint Select Committee, be taken into consideration."

The motion was adopted.

CLAUSES.

MR. SPEAKER.—Now there are no amendments suggested. I was hearing all the lengthy criticism without being supported by any suggestion of an amendment. If the member had thought that it is so bad, would I not be right in expecting one amendment from him ? will now put the clauses to vote. The question is :

"That clauses 2 to 30, both inclusive, stand part of the Bill."

The motion was adopted.

Clauses 2 to 30, both inclusive, were added to the Bill.

CLAUSE 31

MR. SPEAKER.—Clause 31. There is an amendment.

SRI H. R. KESHAVA MURTHY.—I beg to move :

"That at page 36, in line five between the words 'upon' and 'and' the words 'the land between sun rise and sun set' shall be inserted."

MR. SPEAKER.—Amendment moved :

"That at page 36, in line five between the words 'upon' and 'and' the words 'the land between sun rise and sun set' shall be inserted."

SRI M. V. KRISHNAPPA.—I do not accept the amendment.

SRI H. R. KESHAVA MURTHY.—I press it.

MR. SPEAKER.—The question is :

"That at page 36, in line five between the words 'upon' and 'and' the words 'the land between sun rise and sun set' shall be inserted."

The amendment was negatived.

MR. SPEAKER.—The question is :

" That clause 31 stand part of the Bill."

The motion was adopted.

Clause 31 was added to the Bill.

MR. SPEAKER.—The question is :

" That clauses 32 to 48, both inclusive, stand part of the Bill."

The motion was adopted.

Clauses 32 to 48, both inclusive, were added to the Bill.

SCHEDULE.

MR. SPEAKER.—There is an amendment by Sri H. R. Keshava Murthy.

SRI H. R. KESHAVA MURTHY.—I beg to move :

" That at pages 42 and 43 in column 3 of the Schedule for the words :—

1.	One-half acre	..	the Words	..	Ten guntas
2.	Two-thirds acre	..	,,	..	Fifteen guntas
3.	Five-sixth acre	..	,,	..	Twenty guntas
4.	One acre	..	,,	..	Twenty-five guntas
5.	Two acres	..	,,	..	Thirty guntas
6.	Three acres	..	,,	..	Thirty-five guntas
7.	Four acres	..	,,	..	One acre

shall be substituted."

MR. SPEAKER.—Amendment moved :

" That at pages 42 and 43 in column 3 of the Schedule for the words :—

1. One-half acre the words ten guntas
2. Two-thirds acre the words fifteen guntas
3. Five-sixth acre the words twenty guntas
4. One acre the words twenty-five guntas
5. Two acres the words thirty guntas
6. Three acres the words thirty-five guntas
7. Four acres the words one acre

shall be substituted.''

† ಶ್ರೀ ಎಚ್. ಆರ್. ಕೇಶವಮೂರ್ತಿ.—ಈಗ ತಂದಿರತಕ್ಕ ಅಮೆಂಡ್‌ಮೆಂಟ್ ಬಹಳ ಮುಖ್ಯವಾದುದು. ಅದರಲ್ಲೂ ಕೂಡ ರೈತರ ಮಕ್ಕಳಾಗಿ ಮಂತ್ರಿಗಳು ಇಂತಹ.........

MR. SPEAKER.—Where do personalities come here ?

ಶ್ರೀ ಎಚ್. ಆರ್. ಕೇಶವಮೂರ್ತಿ.—ಇಂತಹ ಒಂದು ಷೆಡ್ಯೂಲ್‌ನ್ನು ತರುತ್ತೀರಿ. ಹೀಗೆ ಮಾಡಿ ರೈತರ ವರ್ಗಕ್ಕೆ ಕುಠಾರಪ್ರಾಯರಾಗಿ ವರ್ತಿಸುತ್ತೀರಿ ಎಂದು ತಿಳಿದುಕೊಂಡಿರಲಿಲ್ಲ, ಈ ಬಿಲ್ಲಿನ 3ನೇ ಕ್ಲಾಸಿನಲ್ಲಿ ಸೌತ್ ಕೆನರಾದಲ್ಲಿ ಗಾರ್ಡನ್ ಕ್ರಾಪ್‌ಲ್ಯಾಂಡಿಗೆ 10 ಗುಂಟೆ ಕೊಟ್ಟಿದ್ದೀರಿ. ಆದರೆ ಹಳೇ ಮೈಸೂರಿನಲ್ಲಿ ಇಂತಹ ಕ್ಲಾಸ್ ಆಫ್ ಲ್ಯಾಂಡಿಗೆ ಅರ್ಧ ಎಕರೆ ಕೊಟ್ಟಿದ್ದೀರಿ. ಇಂತಹ ಡಿಸ್ಕ್ರಿಮಿನೇಷನ್ ಏತಕ್ಕೆ ಎಂದು ತಮ್ಮನ್ನು ಕೇಳುತ್ತೇನೆ. ಮಂಡ್ಯ ಮತ್ತು ಕೋಲಾರ ಮತ್ತು ಇನ್ನೂ ಕೆಲವು ಪ್ರದೇಶಗಳಲ್ಲಿ ಜಮೀನ ಬೆಲೆ ಏನು ಇದೆ? ಸೌತ್ ಕೆನರಾದಲ್ಲಿ ಗಾರ್ಡನ್ ಲ್ಯಾಂಡ್ ಇದ್ದರೂ ಅಲ್ಲಿಯ ಜಮೀನಿನ ಬೆಲೆ ಏನು ಇದೆ? ಅದನ್ನು ಇವೊತ್ತೂ ಕೂಡ ವೆರಿಫೈ ಮಾಡಿ ಕೊಳ್ಳಬಹುದು. ಜಮೀನಿಗೆ ಒತ್ತಡ ಎಷ್ಟು ಇದೆ? ಸೌತ್ ಕೆನರಾ ಮತ್ತು ಹಳೇ ಮೈಸೂರು ಏತಕ್ಕೋಸ್ಕರ ಹೀಗೆ ಡಿಸ್ಕ್ರಿಮಿನೇಷನ್ ತೋರಿಸುತ್ತೀರಿ ಎಂದು ನನಗೆ ಅರ್ಥವಾಗುವುದಿಲ್ಲ. ನಾನಾದರೂ ಹೇಳುತ್ತೇನೆ, ಷೆಡ್ಯೂಲಿನ ಸೀರಿಯಲ್ ನಂಬರು (1)ರಲ್ಲಿ ಸೌತ್ ಕೆನರಾದಲ್ಲಿ ಕೊಟ್ಟಿರುವಂತೆ 10 ಗುಂಟೆಗಳನ್ನು ಕೊಡಬೇಕು. ಅದೇರೀತಿ ಪ್ಯಾಡಿಲ್ಯಾಂಡ್‌ಗೆ ಸೌತ್ ಕೆನರಾದಲ್ಲಿ 15 ಗುಂಟೆ ಕೊಟ್ಟಿದ್ದೀರಿ. ನಮ್ಮಲ್ಲೂ ಅದೇ ಗುಂಟೆಗೆ ಬದಲು 2/3 ಎಕರೆ ಮಾಡಿದ್ದೀರಿ. ಅದನ್ನು 15 ಗುಂಟೆ ಮಾಡಬೇಕು. ಹಾಗೆಯೇ 3ನೇ ಕ್ಲಾಸ್ ಲ್ಯಾಂಡ್ ಎಂದರೆ, wet land or garden land other than first or Second Class land possessing facilities for irrigation from Tanks ಇದಕ್ಕೆ 5/6 ಎಕರೆ ಇಂದು ಮಾಡಿದ್ದೀರಿ, ಎಂದರೆ ಹೆಚ್ಚು ಕಡಿಮೆ ಒಂದು ಎಕರೆ ಆಗುತ್ತದೆ. ನಾನಾದರೂ ಹೇಳುತ್ತೇನೆ, ಕೆರೆ ಕೆಳಗಡೆ ಒಂದು ಎಕರೆ ಭೂಮಿ ಇದ್ದರೆ, 40 ಪಲ್ಲ ಭತ್ತ ಬೆಳೆಯಬಹುದು. ಅಲ್ಲಿ 20 ಗುಂಟೆ ಭೂಮಿ ಇದ್ದರೆ, ಒಬ್ಬ ಸುಖವಾಗಿ ಜೀವನ ಮಾಡಬಲ್ಲ. ಅಂತಹ ಒಬ್ಬ ರೈತನನ್ನು ನಾನು ತಮಗೆ ತೋರಿಸುತ್ತೇನೆ.

5-30 P.M.

ಈ 20 ಗುಂಟೆಯನ್ನು ಒಂದು ಫ್ಯಾಮಿಲಿ ಹೋಲ್ಡಿಂಗ್ ಎಂದು ಇಟ್ಟುಕೊಂಡರೂ ಒಬ್ಬನು ಭತ್ತವನ್ನು ಬೆಳೆಸಿಕೊಂಡು ಜೀವನ ಮಾಡಬಲ್ಲ. ಇಂತಹದನ್ನು ಸೀಸ್ ಎಂದು ಟ್ರೀಟ್ ಮಾಡಿ ಅದನ್ನು ಫ್ರಾಗ್‌ಮೆಂಟ್ ಎಂದು ಮಾಡಿದರೆ ರೈತರಿಗೆ ಎಷ್ಟು ಅನ್ಯಾಯವಾಗುತ್ತದೆ! ಒಬ್ಬ ಮನುಷ್ಯನಿಗೆ ಎರಡು ಮಕ್ಕಳು ಇದ್ದರೂ, 20–20 ಎಂದು ಹಂಚಿ ಕೊಟ್ಟರೆ ಅವನು ಸುಖವಾಗಿ ಜೀವನ ಮಾಡಬಲ್ಲನು. 20 ಗುಂಟೆಯೊಳಗೆ, ಎರಡು ಅಥವಾ ಮೂರು ಜನ ಇರತಕ್ಕ ಸಂಸಾರಕ್ಕೆ ಸಾಕಾದಷ್ಟು ಭತ್ತ ಬೆಳೆಯಬಹುದು. ನಾನು ಆದ್ದರಿಂದ 5/6 ಎಕರೆಗೆ 20 ಗುಂಟಾಸ್ ಮಾಡಬೇಕೆಂದು ಅಮೆಂಡ್‌ಮೆಂಟ್ ತಂದಿದ್ದೇನೆ. ಅದೇ ರೀತಿ ಒಂದು ಎಕರೆಗೆ 25 ಗುಂಟಾಸ್ ಮಾಡುವುದು ಒಳ್ಳೆಯದು. ನಮ್ಮಲ್ಲಿ 30 ಅಂಗುಲ ಜಾಸ್ತಿ ಮಳೆ ಇರತಕ್ಕಂತಹ ಪ್ರದೇಶದಲ್ಲಿ ಅನೇಕ ಅಡಿಕೆ, ಬಾಳೆ ತೋಟಗಳಿವೆ. ಈ ಪ್ರದೇಶದಲ್ಲಿ ಎರಡು ಎಕರೆ ಭೂಮಿಯನ್ನು ಯೂನಿಟ್ ಆಗಿ ಇಟ್ಟುಕೊಂಡು ಅದನ್ನು ಮಾಡಬೇಕೆಂದು ನಿಬಂಧನೆ ತಂದುಬಿಟ್ಟರೆ ರೈತರ ಪಾಡೇನು! ಅಂಕಿ ಅಂಶ ತರಿಸಿ ನೋಡಿದರೆ ಎಷ್ಟು ಜನರಿಗೆ ಎರಡು ಎಕರೆ ಅಡಿಕೆ ಅಥವಾ ತೆಂಗಿನ ತೋಟ ಇದೆಯೆಂದು ಗೊತ್ತಾಗುತ್ತದೆ. ಕೇವಲ 15 ಪರ್‌ಸೆಂಟ್ ಜನ ಕೂಡ ಎರಡು ಎಕರೆ ತೋಟವಿರುವವರು ಇಲ್ಲ. ಇದರಿಂದ ರೈತರಿಗೆ ಎಷ್ಟು ಧಕ್ಕೆ ಬರುತ್ತದೆಂಬುದನ್ನು ತಾವು ಆಲೋಚನೆ ಮಾಡಬೇಕು. 30 ಗುಂಟೆ ಒಂದು ಯೂನಿಟ್ ಮಾಡಿದರೆ ಬಹಳ ಅನ್ಯಾಯವಾಗುತ್ತದೆ. ಅದೇ ರೀತಿ ಅರಸಿನಕೆರೆ, ಚಿಕ್ಕನಾಯಕನಹಳ್ಳಿ ಮುಂತಾದ ಪ್ರದೇಶಗಳಲ್ಲಿ ಫಲವತ್ತಾದ ತೆಂಗಿನ ತೋಟಗಳಿವೆ. ಅಲ್ಲಿ ಒಂದು ಎಕರೆಗೆ ಸಾಧಾರಣ 40 ಸಾವಿರ ರೂಪಾಯಿ ಬೆಲೆ ಬಾಳಬಹುದು. ಅಂಥ ಪ್ರದೇಶದಲ್ಲಿ ತಾವು ಮೂರು ಎಕರೆ ಜಮೀನನ್ನು ಒಂದು ಫ್ರಾಗ್‌ಮೆಂಟ್ ಎಂದು ಮಾಡಿದರೆ ಅದು ಸರಿಯೆ ಎಂದು ನಾನು ಕೇಳುತ್ತೇನೆ.

MR. SPEAKER.—The member is questioning the very principles of the Bill. But this Bill is reported by the Joint Select Committee. I have given the fullest time to the member when the Bill had come up for the first reading.

SRI H. R. KESHAVA MURTHY.—Even now the Hon'ble Minister has not given attention to the popular feelings. He does not want to budge an inch from the decision of the Ruling Party. ಆದ್ದರಿಂದ 40 ಸಾವಿರ ರೂಪಾಯಿ ಬಾಳತಕ್ಕ ಜಮೀನಿನಿಂದ ಒಬ್ಬ ಸುಖವಾಗಿ ಜೀವನ ಮಾಡಬಲ್ಲ. ಕಾನೂನು ಪ್ರಕಾರ ರಿಜಿಸ್ಟರ್ಡ್ ವ್ಯಾಲ್ಯು ವಿಭಾಗ ಮಾಡುವುದಕ್ಕೆ ಅವಕಾಶವಿಲ್ಲ. ಮುಂದೆ ಕೋರ್ಟಿನಲ್ಲಿ ಹೋಗಿ ಲೀಗಲ್ ಕಾಂಪ್ಲಿಕೇಶನ್ ಬರುತ್ತದೆ. ಅದಕ್ಕೋಸ್ಕರ ನಾನು ಒಂದು ಅಮೆಂಡ್‌ಮೆಂಟ್ ತಂದಿದ್ದೇನೆ.

ಚಿಕ್ಕನಾಯಕನಹಳ್ಳಿ, ತುರುವೆಕೆರೆ 25 ಇಂಚಿನೊಳಗೆ ಮಳೆ ಬೀಳುವಂತಹ ಪ್ರದೇಶ. ಆದ್ದರಿಂದ ಇದು ರೈತರ ಹಿತಕ್ಕೆ ಧಕ್ಕೆ ತರುವಂತದು ಮತ್ತು ಇದರಿಂದ ಲೀಗಲ್ ಕಾಂಪ್ಲಿಕೇಶನ್ಸ್ ಬರುತ್ತದೆ; ಮತ್ತು ಜನರಿಗೆ ಕಿರುಕುಳ ಕೊಟ್ಟಂತೆ ಆಗುತ್ತದೆ. ಆದ್ದರಿಂದ ದಯವಿಟ್ಟು ತಾವು ಈ ಅಮೆಂಡ್‌ಮೆಂಟನ್ನು ಒಪ್ಪಿಕೊಳ್ಳಬೇಕೆಂದು ನನ್ನ ಪ್ರಾರ್ಥನೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ಜನರಿಗೆ ಭೀತಿ ಹುಟ್ಟುವ ಹಾಗೆ ಹೇಳುತ್ತಾರೆ. ಇನ್ನೂ ಸ್ಟಾಂಡರ್ಡ್ ಎಕರೆ ಇತ್ಯರ್ಥ ಆಗಿಲ್ಲ. ಮೈಸೂರು ದೇಶದಲ್ಲಿ ಯಾವ ಯಾವ ಏರಿಯಾದಲ್ಲಿ ಎಷ್ಟೆಷ್ಟು ಸ್ಟಾಂಡರ್ಡ್ ಎಕರೆ ಬರುತ್ತದೆ ಎನ್ನುವುದನ್ನು ಈಗ ಪರಿಶೀಲನೆ ಮಾಡುತ್ತಿದ್ದಾರೆ. ಹಾಗೆ ಏನಾದರೂ ಆ ರೀತಿ ತುರುವಕೆರೆಯಲ್ಲಿ ಒಂದು ಎಕರೆಗೆ 40 ಸಾವಿರ ಬೆಲೆ ಬಾಳುವ ತೆಂಗಿನ ತೋಟ ಫ್ರಾಗ್‌ಮೆಂಟ್ ಆಗುವ ಕಾಲಕ್ಕೆ ನಿಜವಾಗಿಯೂ ಅದರಿಂದ ರೈತರಿಗೆ ತೊಂದರೆಯಾಗುವ ಸಂಭವವಿದ್ದರೆ, ಸರ್ಕಾರದವರು ಅಮೆಂಡ್‌ಮೆಂಟ್ ಮಾಡಿಕೊಳ್ಳುವುದಕ್ಕೆ ಸಿದ್ಧವಾಗಿದ್ದಾರ.

* * *

SRI H. R. KESHAVA MURTHY.—I want to press the amendment, Sir.

MR. SPEAKER.—I will put the amendment of Sri Keshava Murthy to the vote of the House. The question is :

" That on page 42 and 43 in column 3 of the schedule for the words :

1.	half an acre	..	10 guntas
2.	2/3 of an acre	..	15 guntas
3.	5/6 of an acre	..	20 guntas
4.	1 acre	..	25 guntas
5.	3 acres	..	30 guntas
6.	3 acres	..	35 guntas
7.	4 acres	..	1 acre.

shall be substituted : "

The amendment was negatived.

MR. SPEAKER.—The question is :

" That the schedule stand part of the Bill."

The motion was adopted.

The schedule was added to the Bill.

CLAUSE 1, TITLE AND PREAMBLE.

MR. SPEAKER.—The question is :

" That clause 1, the title and the preamble stand part of the Bill."

The motion was adopted.

Clause 1, the title and the preamble were added to the Bill.

Motion to pass.

SRI M. V. KRISHNAPPA.—Sir, I beg to move :

" That the Mysore Prevention of Fragmentation and Consolidation of Holdings Bill, 1964, as reported by the Joint Select Committee be passed."

MR. SPEAKER.—The question is :

"That the Mysore Prevention of Fragmentation and Consolidation of Holdings Bill, 1964, as reported by the Joint Select Committee, be passed."

The motion was adopted.

MR. SPEAKER.—There is the next Bill.

SRI C. J. MUCKANNAPPA.—We can take it up on the next day, Sir.

SRI R. M. PATIL.—Along with this, we can take up the other Bills on Monday.

MR. SPEAKER.—The House stands adjourned to meet again at 8-30 A.M. tomorrow.

The House adjourned at Forty Minutes past Five of the Clock to meet again at Thirty Minutes past Eight of the Clock on Saturday, the 30th July 1966.